## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

ಸಿ.ಸಿ ನಂ. 149/2022

ಸಿ.ಡಬ್ಲ್ಯೂಃ 13, ಪಿ.ಡಬ್ಲ್ಯೂಃ 9

| | | |
|---|---|---|
| **ಸಾಕ್ಷಿದಾರರ ಹೆಸರು** | : | ದಿಲೀಪ್ ಈರಾ ಗುಣಗಿ |
| **ತಂದೆಯ ಹೆಸರು** | : | ಈರಾ ಗುಣಗಿ |
| **ವಯಸ್ಸು** | : | 50 ವರ್ಷ |
| **ಉದ್ಯೋಗ** | : | ಆರ್.ಪಿ.ಎಫ್., ಮುಖ್ಯ ಪೇದೆ |
| **ವಾಸ** | : | ಕಾರವಾರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 31-10-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನಾನು ಸನ್ 2019 ಮಾರ್ಚ್ ತಿಂಗಳಿನಿಂದ ಈ ದಿನದವರೆಗೆ ಕಾರವಾರ ಆರ್.ಪಿ.ಎಫ್.,ನಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡಿದ್ದೇನೆ.

ದಿ.28-11-2019 ರಂದು ನನ್ನನ್ನು ಕಾರವಾರದ ರೆಲ್ವೇ ನಿಲ್ದಾಣದಲ್ಲಿ ಬೆಳಿಗ್ಗೆ 6.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಚಾಸಾ-11 ರವರು ಬೆಳಿಗ್ಗೆ 6.30 ಗಂಟೆಗೆ ನನಗೆ ಫೋನು ಮಾಡಿ, ಮತ್ಸ್ಯಗಂಧ ಎಕ್ಸಪ್ರೆಸ್ ರೈಲ್ವೇ ನಂ.12619 ರಲ್ಲಿ ಮುರ್ಡೇಶ್ವರದಲ್ಲಿ ಕಳ್ಳತನ ಮಾಡಿ ಆರೋಪಿತನು ಆಟೋದಲ್ಲಿ ಭಟ್ಕಳದ ಬಸ್ ನಿಲ್ದಾಣಕ್ಕೆ ಹೋಗುತ್ತಿದ್ದಾನೆಂದು ಮಾಹಿತಿ ಬಂದಿದ್ದು, ಅದಕ್ಕೆ ನನಗೆ ಕಾರವಾರದ ಬಂದರಿನ ರಸ್ತೆಯಲ್ಲಿ ನಿಲ್ಲಲು ಹೇಳಿದರು. ಆದ್ದರಿಂದ ನಾನು ಚಾಸಾ-4, 11, 12, ರವರು ಬಂದರಿನ ರಸ್ತೆಯಲ್ಲಿ ನಿಂತಿದ್ದೆವು. ಆರೋಪಿತನು ಭಟ್ಕಳದ ಬಸ್ಸಿನಿಂದ ಕಾರವಾರಕ್ಕೆ ಬರುತ್ತಿರುವುದಾಗಿ ನಮಗೆ ಮಾಹಿತಿ ನೀಡಲಾಗಿತ್ತು. ಬೆಳಿಗ್ಗೆ 9.30 ಕ್ಕೆ ಸದರಿ ಬಸ್ಸು ಕಾರವಾರಕ್ಕೆ ಬಂದಿತ್ತು. ನಾವು ಬಸ್ಸನ್ನು ತಡೆದು ಆರೋಪಿತರನ್ನು ವಿಚಾರಣೆಗೊಳಪಡಿಸಿ ಅವರನ್ನು ಬಸ್ಸಿನಿಂದ ಕೆಳಗೆ ಇಳಿಸಿ, ಅವರ ಬಳಿ ಇದ್ದ ಬ್ಯಾಗನ್ನು ಪಂಚರ ಸಮ್ಮುಖದಲ್ಲಿ ಪರಿಶೀಲಿಸಲಾಯಿತು. ಆರೋಪಿತರ ಬಳಿ ಇದ್ದ ಬ್ಯಾಗುಗಳನ್ನು ಪರಿಶೀಲಿಸಿದಾಗ ಅದರಲ್ಲಿ ಆಧಾರ ಕಾರ್ಡು, ಎಟಿಎಂ, ಪರ್ಸ್ ಮತ್ತು ಅದರಲ್ಲಿ ಹಣ ಇತ್ತು. ಇನ್ನೊಂದು ಬ್ಯಾಗಿನಲ್ಲಿ ಕೈ ಬಳೆಗಳು, ಕಿವಿಯ ಓಲೆ, ಮಂಗಳ ಸೂತ್ರ,

ಚೈನು ಇತ್ತು. ಪಂಚರಾದ ಚಾಸಾ-4 ಮತ್ತು 5 ರವರ ಸಮ್ಮುಖದಲ್ಲಿ ಪಂಚನಾಮೆ ಮಾಡಿ ವಸ್ತುಗಳನ್ನು ಜಪ್ತುಪಡಿಸಿಕೊಳ್ಳಲಾಯಿತು. ಆರೋಪಿತರ ಹೆಸರುಗಳನ್ನು ಕೇಳಿದಾಗ ಅವರ ಹೆಸರು ದಿಲೀಪ್ ಮಿಶ್ರಾ, ಮುಖಂದರ್ ಲಲ್ಲಾನ್ ನಿಶಾದ್ ಮತ್ತು ಕುಲ್ಲು ನಿಶಾದ್ ಎಂದು ತಿಳಿಸಿದರು. ಪಂಚನಾಮೆಯನ್ನು ಸ್ಥಳದಲ್ಲಿ ಬೆಳಿಗ್ಗೆ 9.30 ರಿಂದ 10.15 ರವರೆಗೆ ಮಾಡಲಾಯಿತು. ಜಪ್ತುಪಪಡಿಸಿಕೊಂಡ ಮುದ್ದೆಮಾಲುಗಳನ್ನು ಮಾರನೇ ದಿನ ಮುರ್ಡೇಶ್ವರದ ಪೋಲಿಸ್ ಠಾಣೆಗೆ ಹಸ್ತಾಂತರಿಸಲಾಯಿತು. ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಎಂಓ-1 ರಿಂದ 20 ಎಂದು ಗುರತಿಸಲಾಗಿದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿ.ಸಿ ಮುಖಾಂತರ ಹಾಜರುಪಡಿಸಿಕೊಂಡ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ 1 ಮತ್ತು 3 ನೇ ಆರೋಪಿಯರನ್ನು ಸ್ಪಿಲ್ಟ್ ಅಪ್ ಮಾಡಲಾಗಿದೆ. ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ. ಅದನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದಃ**

ಚಾಸಾ-11 ರವರು ಫೋನು ಮಾಡಿದ ನಂತರ ನಾನು ಮುರ್ಡೇಶ್ವರ ರೈಲ್ವೇ ನಿಲ್ದಾಣಕ್ಕೆ ಬಂದಿರಲಿಲ್ಲ. ಕಾರವಾರದ ರೆಲ್ವೇ ನಿಲ್ದಾಣದಿಂದ ನಾವು ಬೆಳಿಗ್ಗೆ 7.30 ಕ್ಕೆ ಹೊರಟು ಕಾರವಾರ ಬಂದರು ರಸ್ತೆಗೆ ಬೆಳಿಗ್ಗೆ 7.45 ಕ್ಕೆ ಬಂದು ತಲುಪಿರುತ್ತೇವೆ. ಬಸ್ಸು ಬರುವುದನ್ನು ನಾವು ಬೆಳಿಗ್ಗೆ 9.30 ರವರೆಗೆ ಕಾದಿರುತ್ತೇವೆ. ಪಂಚರನ್ನು ಚಾಸಾ-11 ರವರು ಸ್ಥಳಕ್ಕೆ ಕರೆಸಿದ್ದರು. ನಾನು ಹೇಳಿಕೆ ಕೊಡುವಾಗ ಮೇಲಿನಂತೆ ಹೇಳಿಕೆ ನೀಡಿರುತ್ತೇನೆ. ನಾವು ಯಾವುದೇ ಆರೋಪಿತರನ್ನು ಪರಿಶೀಲಿಸಿಲ್ಲ ಮತ್ತು ಬಂಧಿಸಿಲ್ಲ ಅವರ ಬಳಿಯಿಂದ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-8 ಪಂಚನಾಮೆಯನ್ನು ಠಾಣೆಯಲ್ಲಿ ಸುಳ್ಳು ಸೃಷ್ಠಿ ಮಾಡಿ ಸಹಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ, ಆರೋಪಿತರಿಗೂ, ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**